***(ಸಾಕ್ಷಿಯನ್ನು ದಿನಾಂಕಃ 29.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)***

**ಮುಖ್ಯ ವಿಚಾರಣೆಃ - ವಾದಿ ಪರಃ ಶ್ರೀಮತಿ ಎಂ ಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದು, ಪ್ರಮಾಣಪತ್ರಿಕೆಯಲ್ಲಿ ಬರೆಸಿರುವ ವಿಷಯಗಳೆಲ್ಲವೂ ಸತ್ಯವಾಗಿದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ.

ನಾನು ಈಗಾಗಲೇ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಪ್ರತಿವಾದಿಗಳು ಬರೆದುಕೊಟ್ಟಿರುವ ದಿನಾಂಕಃ *21.08.2018* ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿ.ಪಿ. *1* ಎಂದು, ಅದರಲ್ಲಿನ ವಾದಿಯ ಸಹಿಯನ್ನು ನಿ.ಪಿ. *1(ಎ)* ಎಂದು, ಪ್ರತಿವಾದಿ *1* ರವರ ಸಹಿಯನ್ನು ನಿ.ಪಿ. *1(ಬಿ)* ಎಂದು, ಪ್ರತಿವಾದಿ *2* ರವರ ಸಹಿಯನ್ನು ನಿ.ಪಿ. *1(ಸಿ)* ಎಂದು ಗುರುತಿಸಲಾಯಿತು. ಸದರೀ ಕರಾರು ಪತ್ರಕ್ಕೆ ಮೋಹನ್ ಮತ್ತು ರವಿ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರೀ ಕರಾರು ಪತ್ರವನ್ನು ಮಹದೇವ್ ರವರು ಬರೆದಿರುತ್ತಾರೆ. ಕಾನೂನು ತಿಳುವಳಿಕೆ ಪತ್ರವನ್ನು ನಿ.ಪಿ. *2* ಎಂದು, ಎರಡು ಅಂಚೆ ರಶೀದಿಗಳನ್ನು ನಿ.ಪಿ. *3* ಮತ್ತು *4,* ಅಂಚೆ ಸ್ವೀಕೃತಿಯನ್ನು ನಿ.ಪಿ. *5* ಎಂದು, ಪ್ರತಿವಾದಿ *2* ರವರಿಗೆ ಜಾರಿಯಾಗದೇ ವಾಪಸ್ಸಾಗಿರುವ ಅಂಚೆ ಲಕೋಟೆಯನ್ನು ನಿ.ಪಿ. *6* ಎಂದು, ಅದರಲ್ಲಿನ ಪ್ರತಿಯನ್ನು ನಿ.ಪಿ. *6(ಎ)* ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೇಃನ್ಯಾಃದಲ್ಲಿ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

*2* ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮದ್ದೂರು.

ಸಾಕ್ಷಿಯ ಸಹಿಃ